ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಗುರುವಾರ, ದಿನಾಂಕ: 18ನೇ ಜುಲೈ, 2019

ಕೆಂಪೇಗೌಡ ಬಸ್ ನಿಲ್ದಾಣದ ಆವರಣದ ಸರ್ಕಾರಿ ಸ್ವಾಮ್ಯದ ಮಳಿಗೆ ಬಗ್ಗೆ

ಶ್ರೀ ಹೆಚ್. ಎಂ. ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):-

322 (189) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೆಂಪೇಗೌಡ ಬಸ್ ನಿಲ್ದಾಣದ ಆವರಣದಲ್ಲಿ ಸರ್ಕಾರಿ ಸ್ವಾಮ್ಯದ ಎಷ್ಟು ಮಳಿಗೆಗಳನ್ನು ಬಾಡಿಗೆ ಆಧಾರದ ಮೇಲೆ ನೀಡಲಾಗಿದೆ;

(ಆ) ಇಲ್ಲಿ ಕೆ.ಎಂ.ಎಫ್ ನಂದಿನಿ, ಹಾಪ್‌ಕಾಮ್ಸ್ ಮತ್ತು ಬ್ಯಾಂಕಿನ ಎ.ಟಿ.ಎಂ. ಮಳಿಗೆಗಳಿಗೆ ಈ ಹಿಂದೆ ನಿಗಧಿಪಡಿಸಿರುವ ಪರವಾನಿಗೆ ಶುಲ್ಕವೆಷ್ಟು; ಈಗ ನಿಗಧಿಪಡಿಸಿರುವ ಪರವಾನಿಗೆ ಶುಲ್ಕವೆಷ್ಟು ;

(ಇ) ಪ್ರಸ್ತುತ ಮಳಿಗೆಗಳಿಗೆ ಪರಿಷ್ಕರಿಸಿ ನಿಗಧಿಪಡಿಸಿರುವ ದರವು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಪ್ರಸ್ತುತ ಪರಿಷ್ಕರಿಸಿರುವ ದರವು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಉತ್ತೇಜನಕ್ಕೆ ಮತ್ತು ರೈತರ ಹಿತದೃಷ್ಟಿಯಿಂದ ಮಾರಕವಾಗಿರುವುದಿಲ್ಲವೇ? (ಪೂರ್ಣ ಮಾಹಿತಿ ನೀಡುವುದು)